# ಸ್ನಾನವ ಮಾಡಿರೊ ಜ್ನಾನ ತೀರ್ಥದಲ್ಲಿ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
3. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru.
4. **Note:** The wordings as in Ref. 1 are mentioned without highlights. The wordings in Ref. 2 and Ref. 3 are slightly different from that of Ref. 1, but they are fully matching with each other. These are not considered here and the lyrics as per Ref. 1 is given here.
5. **Note:** The singer has followed the lyrics as in Ref. 1.

ರಾಗ ಪೂರ್ವಿ ಅಟ ತಾಳ

ಸ್ನಾನವ ಮಾಡಿರೊ ಜ್ನಾನ ತೀರ್ಥದಲ್ಲಿ
ನಾನು ನೀನೆಂಬ ಅಹಂಕಾರವ ಬಿಟ್ಟು ॥ ಪ ॥

ತಂದೆ ತಾಯಿಗಳ ಸೇವೆ ಒಂದು ಸ್ನಾನ
ಬಂಧನದವರ ಬಿಡಿಸಲೊಂದು ಸ್ನಾನ
ಮುಂದಣ ಮಾರ್ಗ ತಿಳಿದರೊಂದು ಸ್ನಾನ
ಇಂದಿರೇಶನ ಧ್ಯಾನವೆ ಗಂಗಾ ಸ್ನಾನ ॥ 1 ॥

ಪರಸತಿಯ ಬಯಸದಿದ್ದರೆ ಒಂದು ಸ್ನಾನ
ಪರರ ನಿಂದಿಸದಿರುವುದು ಒಂದು ಸ್ನಾನ
ಪರರೊಡವೆಯಪಹರಿಸದಿರೆ ಒಂದು ಸ್ನಾನ
ಪರತತ್ವ ತಿಳಿದುಕೊಂಡರೆ ಗಂಗಾ ಸ್ನಾನ ॥ 2 ॥

ತನ್ನೊಳು ತಾನೇ ತಿಳಿದರೊಂದು ಸ್ನಾನ

ಅನ್ಯಾಯ ನುಡಿಯದಿದ್ದರೆ ಒಂದು ಸ್ನಾನ
ಅನ್ಯಾಯ ಮಾಡದಿರಲು ಒಂದು ಸ್ನಾನ
ಚೆನ್ನಾಗಿ ಹರಿಯ ನೆನೆಯೆ ಗಂಗಾ ಸ್ನಾನ ॥ 3 ॥

ಅತ್ತೆ ಮಾವರ ಸೇವೆಯು ಒಂದು ಸ್ನಾನ
ಭರ್ತನ ಮಾತ ಕೇಳುವುದು ಒಂದು ಸ್ನಾನ
ಕ್ಷೇತ್ರ ಪಾತ್ರರ ಸಹವಾಸ ಒಂದು ಸ್ನಾನ
ಪಾರ್ಥಸಾರಥಿ ಧ್ಯಾನವೆ ಗಂಗಾ ಸ್ನಾನ ॥ 4 ॥

ವೇದ ಶಾಸ್ತ್ರವನೋದುವುದೊಂದು ಸ್ನಾನ
ಭೇದಾಭೇದವ ತಿಳಿದರೊಂದು ಸ್ನಾನ
ಸಾಧು ಸಜ್ಜನರ ಸಂಗ ಒಂದು ಸ್ನಾನ
ಪುರಂದರ ವಿಠಲನ ಧ್ಯಾನವೆ ಗಂಗಾ ಸ್ನಾನ ॥ 5 ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಭರ್ತ** = ಪೋಷಕ, ಗಂಡ, ಯಜಮಾನ, ರಕ್ಷಕ

**ಪಾರ್ಥಸಾರಥಿ** = ಕೃಷ್ಣ

**Classification:** Keerthane
**Ankita:** Purandara Vittala
**Location:** NA
**Category:** Jeevanoddhara
**Group Words:** snAna, jnana, thirtha, tande, tayi, bandhu, gange, Dhyana, Krishna, shastra, sadhu,
**Pravachana:** NA
**Explanation:** NA